₹ ಲಕ್ಷಗಳಲ್ಲಿ

2010–11	1296.76
2011–12	1131.86
2012–13	1541.96
ಒಟ್ಟು	**3970.58**

ಐ.ಡಿ.ಎಸ್.ಪಿ ಕಾರ್ಯಕ್ರಮ:

₹ ಲಕ್ಷಗಳಲ್ಲಿ

2010–11	218.19
2011–12	103.48
2012–13	214.22
ಒಟ್ಟು	**535.89**

ರಾಜ್ಯ ರಸ್ತೆ ಸಾರಿಗೆ ಆದಾಯಗಳಿಕೆ

503(969); ಶ್ರೀ ಎನ್.ಎ. ಹ್ಯಾರಿಸ್ (ಶಾಂತಿ ನಗರ)

1) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಆದಾಯ ಹೆಚ್ಚಳಕ್ಕಾಗಿ ನೂತನ ಸರ್ಕಾರ ಹಮ್ಮಿಕೊಂಡ ಕಾರ್ಯಕ್ರಮಗಳೇನು;

2) ಸಂಸ್ಥೆಯು ಆದಾಯ ಸೋರಿಕೆ ತಡೆಗಟ್ಟುವಲ್ಲಿ ಕೈಗೊಂಡ ಕ್ರಮಗಳೇನು;

3) ಆದಾಯ ಸೋರಿಕೆಯಲ್ಲಿ ಬಳಗೊಂಡ ಅವ್ಯವಹಾರಗಳ ಪ್ರಕರಣಗಳನ್ನು ಗುರುತಿಸಿ ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಲಾಗಿದೆಯೇ;

4) ಸಾರಿಗೆ ಸಂಸ್ಥೆಯಲ್ಲಿನ ಪಟ್ಟಭದ್ರ ಹಿತಾಸಕ್ತಿಗಳನ್ನು ನಿಷ್ಕ್ರಿಯೆಗೊಳಿಸಲು ಸಂಸ್ಥೆಯ ಪರಿಣಾಮಕಾರಿ ಕ್ರಮಗಳೇನು?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಪ್ರಸಕ್ತ ಸಾಲಿನಲ್ಲಿ 4 ಸಾರಿಗೆ ಸಂಸ್ಥೆಗಳಿಂದ ಒಟ್ಟು 1434 ಹೊಸ ವಾಹನಗಳನ್ನು ಖರೀದಿಸಿ, ಪ್ರಯಾಣಿಕರ ಬೇಡಿಕೆಗ ಅನುಗುಣವಾಗಿ ಹೆಚ್ಚಿನ ಆದಾಯಗಳಿಸುವ ನಿಟ್ಟಿನಲ್ಲಿ ಕಾರ್ಯಯೋಜನೆ ಹಮ್ಮಿಕೊಳ್ಳಲಾಗಿದೆ.

ನೆರೆ ರಾಜ್ಯಗಳಾದ ತಮಿಳನಾಡು, ಕೇರಳ, ಮಹಾರಾಷ್ಟ್ರ, ಗೋವಾ, ಪಾಂಡಿಚೇರಿ, ಹಾಗೂ ಗುಜರಾತ್ ರಾಜ್ಯಗಳೊಂದಿಗೆ ನೂತನ ಪೂರಕ ಅಂತರರಾಜ್ಯ ಸಾರಿಗೆ ಒಪ್ಪಂದಗಳನ್ನು ಮಾಡಿಕೊಳ್ಳುವ ಕ್ರಮ ಪ್ರಗತಿಯಲ್ಲಿದೆ.

ಬೆಂಗಳೂರು ಅಂತರರಾಜ್ಯ ವಿಮಾನ ನಿಲ್ದಾಣದಿಂದ ಮೈಸೂರು ನಗರಕ್ಕೆ ನಾಲ್ಕು ವಿಕಮುಖ ಸುತ್ತುವಳಿಗಳ ನೂತನ ಹವಾ ನಿಯಂತ್ರಿತ ಪ್ಲೈ ಬಸ್ಸುಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.

ಜೆಎನ್‌ನರ್ಮ್ ಯೋಜನೆ ಅಡಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಯೋಗದೊಂದಿಗೆ 2014 ವಾಹನಗಳನ್ನು ಖರೀದಿಸಿ ರಾಜ್ಯದ ಎಲ್ಲಾ ಜಿಲ್ಲೆಗಳ ನಗರ/ಪಟ್ಟಣಗಳಿಗೆ ಕಾರ್ಯಾಚರಣೆ ಮಾಡಲಾಗುವುದು.

ಪ್ರಯಾಣಿಕರ ದಟ್ಟಣೆಗನುಗುಣವಾಗಿ ವಾರಾಂತ್ಯಗಳ, ಹಬ್ಬಹರಿದಿನಗಳಲ್ಲಿ, ಜಾತ್ರೆ, ಸಾರ್ವತ್ರಿಕ ರಜಾ ದಿನಗಳ ಸಂದರ್ಭಗಳಲ್ಲಿ ಪ್ರಯಾಣಿಕರ ಅವಶ್ಯಕತೆಗೆ ಅನುಗುಣವಾಗಿ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.

ಖಾಸಗಿ ಪ್ರವರ್ತಕರುಗಳು ಅನಧಿಕೃತವಾಗಿ ಪರವಾನಗಿ ನಿಯಮಾವಳಿಗಳನ್ನು ಉಲ್ಲಂಘಿಸಿ ಕಾರ್ಯಾಚರಣೆ ಮಾಡುತ್ತಿರುವುದನ್ನು ತಡೆಗಟ್ಟಲು ಸೂಕ್ತ ಕ್ರಮ ಜರುಗಿಸಲಾಗಿತ್ತಿದೆ.

ಕಡಿಮೆ ಆದಾಯ ತರುತ್ತಿರುವ ದೂರ ಮಾರ್ಗದ ಸಾರಿಗೆಗಳ, ಅಂತರರಾಜ್ಯ ಸಾರಿಗೆಗಳ, ವೇಗದೂತ ಹಾಗೂ ಪ್ರತಿಷ್ಠಿತ ಸಾರಿಗೆಗಳ

ಆದಾಯದ ಬಗ್ಗೆ ಗಮನವಿರಿಸಿ ಅವುಗಳನ್ನು ನಿಯಮಿತವಾಗಿ ಪರಿಷ್ಕರಿಸಿ ಆದಾಯವನ್ನು ಹೆಚ್ಚಿಸಲು ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಆ) ಸಾರಿಗೆ ಆದಾಯ ಸೋರಿಕೆಯನ್ನು ತಡೆಗಟ್ಟಲು ತನಿಖಾದಳಗಳನ್ನು ಸ್ಥಾಪಿಸಲಾಗಿದೆ. ಇದಲ್ಲದೇ ಸಾರಿಗೆ ಆದಾಯ ಸೋರಿಕೆಯನ್ನು ತಡೆಗಟ್ಟಲು ವಿದ್ಯುನ್ಮಾನ ಟಿಕೇಟ್ ವಿತರಣಾ ಯಂತ್ರದಿಂದಲೇ ಟಿಕೇಟ್ ನೀಡುವ ಪದ್ಧತಿಯನ್ನು ಜಾರಿಗೆ ತರಲಾಗಿದೆ.

ಇ) ಹೌದು

ಈ) ಸಾರಿಗೆ ಸಂಸ್ಥೆಯಲ್ಲಿ ಪಟ್ಟಭದ್ರ ಹಿತಾಸಕ್ತಿಗಳನ್ನು ಗುರುತಿಸಿ, ಅಂತಹ ಸಿಬ್ಬಂದಿಗಳ ವಿರುದ್ಧ ಪೊಲೀಸ್ ಪ್ರಕರಣಗಳನ್ನು ದಾಖಲಿಸುವುದರೊಂದಿಗೆ ಸಂಸ್ಥೆಯ ಭದ್ರತಾ ಮತ್ತು ಜಾಗೃತಾ ಇಲಾಖೆಯ ಅಧಿಕಾರಿಗಳಿಂದ ತನಿಖೆ ನಡೆಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ನರ್ಮ್ ಯೋಜನೆಯ ಅನುಷ್ಠಾನ

504(970); ಶ್ರೀ ಎನ್.ಎ. ಹ್ಯಾರಿಸ್ (ಶಾಂತಿ ನಗರ)

ಅ) ಕೇಂದ್ರ ಸರ್ಕಾರದವರು ನರ್ಮ್ ಯೋಜನೆಯಡಿಯಲ್ಲಿ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಮೂಲ ಸೌಲಭ್ಯಗಳನ್ನು ಅಳವಡಿಸಲು ಮಂಜೂರು ಮಾಡಿದ ಅನುದಾನದ ಮೊತ್ತ ಎಷ್ಟು;

ಆ) ನರ್ಮ್ ಯೋಜನೆಯ ಮೂಲಕ ಕೇಂದ್ರ ಸರ್ಕಾರ ಇದುವರೆಗೆ ರಾಜ್ಯಕ್ಕೆ ಮಂಜೂರು ಮಾಡಿದ ಮೊತ್ತ ಎಷ್ಟು;

ಇ) ಕೇಂದ್ರ ಸರ್ಕಾರದ ಉದಾರ ಆರ್ಥಿಕ ನೆರವಿನ ಮೂಲಕ ರಾಜ್ಯದ ಸಾರಿಗೆ ಸಂಸ್ಥೆ ಮತ್ತು ಮಹಾನಗರ ಸಾರಿಗೆ ಸಂಸ್ಥೆಗಳು ಮೂಲ